ಹುಮನಾಬಾದ್ ಸಂಚಾರ ಪೊಲೀಸ್ ಠಾಣೆ

	ಪಿಎಸ್ಐ	ಎಎಸ್ಐ	ಹೆಚ್ಸಿ	ಮಹೆಚ್ಸಿ	ಪಿಸಿ	ಮಪಿಸಿ	ಎಪಿಸಿ (ಡಿ)	ಒಟ್ಟು
ಮಂಜೂರಾತಿ ಬಲ	2	2	10	2	31	4	1	52
ವಾಸ್ತವ ಬಲ	2	2	10	2	31	4	1	52

ಹೊಕ್ರಾಣ ಪೊಲೀಸ್ ಠಾಣೆ

	ಪಿಎಸ್ಐ	ಎಎಸ್ಐ	ಹೆಚ್ಸಿ	ಮಹೆಚ್ಸಿ	ಪಿಸಿ	ಮಪಿಸಿ	ಎಪಿಸಿ (ಡಿ)	ಒಟ್ಟು
ಮಂಜೂರಾತಿ ಬಲ	2	2	9	1	20	3	–	37
ವಾಸ್ತವ ಬಲ	2	2	9	1	20	3	–	37

ಇ) ಜಿಲ್ಲೆಯಲ್ಲಿ 7–ಪಿ.ಎಸ್.ಐ. ಹಾಗೂ 58–ಸಿಪಿಸಿ / ಮಪಿಸಿ ಹುದ್ದೆಗಳು ಖಾಲಿಯಿದ್ದು, ಪ್ರಸ್ತುತ ಈ ಹುದ್ದೆಗಳಲ್ಲಿ ಸಿಪಿಸಿ/ಮಪಿಸಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈಗಾಗಲೇ ಕ್ರಮ ಜರುಗಿಸಲಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ರವಾನಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಸಾರಿಗೆ ಇಲಾಖೆಯ ಯೋಜನೆಗಳು

889 (1116) ಶ್ರೀ ಪ್ರಭು ಚೌವ್ಹಾಣ್ (ಔರಾದ್) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಾರಿಗೆ ಇಲಾಖೆಯ ವತಿಯಿಂದ ಅನುಷ್ಠಾನ ಮಾಡಲು ಉದ್ದೇಶಿಸಿರುವ ಯೋಜನೆಗಳು ಎಷ್ಟು; ಅವುಗಳ ರೂಪರೇಷೆಗಳೇನು (ತಾಲ್ಲೂಕುವಾರು ವಿವರ ನೀಡುವುದು);

ಆ) ಜಿಲ್ಲೆಯಲ್ಲಿ ಹಲವಾರು ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸಂಸ್ಥೆಯ ವಾಹನಗಳು ಸಂಚರಿಸದೇ ಇರುವುದರಿಂದ ಗ್ರಾಮೀಣ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸದರಿ ತೊಂದರೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು)?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :

ಅ) ಈ.ಕ.ರ.ಸಾ.ಸಂಸ್ಥೆಯ ವತಿಯಿಂದ, ಬೀದರ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು ಉದ್ದೇಶಿಸಿರುವ ಒಟ್ಟು ಯೋಜನೆಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ತಾಲ್ಲೂಕು	ಒಟ್ಟು ಯೋಜನೆಗಳು	ಮೊತ್ತ ರೂ.(ಲಕ್ಷಗಳಲ್ಲಿ)
ಬೀದರ	04	104.00
ಭಾಲ್ಕಿ	01	80.00
ಹುಮ್ನಾಬಾದ	01	60.00
ಬಸವ ಕಲ್ಯಾಣ	01	170.00
ಒಟ್ಟು	**07**	**414.00**

ವಿವರವಾದ ಪಟ್ಟಿಯನ್ನು **ಅನುಬಂಧ–ಅ** ಲಗತ್ತಿಸಲಾಗಿದೆ.

ಅಲ್ಲದೆ ಬೀದರ ವಿಭಾಗಕ್ಕೆ 2011–12ನೇ ಸಾಲಿನಲ್ಲಿ 58 ಹೊಸ ವಾಹನಗಳನ್ನು ನೀಡುವ ಯೋಜನೆ ಇದ್ದು, ಈಗಾಗಲೇ 53 ಹೊಸ ವಾಹನಗಳನ್ನು ನೀಡಲಾಗಿರುತ್ತದೆ.

ಆ) ಹೌದು, ಬೀದರ ಜಿಲ್ಲೆಯಲ್ಲಿ ಒಟ್ಟು 591 ಜನವಸತಿವುಳ್ಳ ಗ್ರಾಮಗಳಿದ್ದು, ಅವುಗಳಲ್ಲಿ 571 ಗ್ರಾಮಗಳಿಗೆ ಸಾರಿಗೆ ಸಂಪರ್ಕ ಒದಗಿಸಲಾಗುತ್ತಿದೆ. ಬಾಕಿ ಇರುವ 20 ಗ್ರಾಮಗಳಲ್ಲಿ, 14 ಗ್ರಾಮಗಳಿಗೆ ಸಮರ್ಪಕ ಸಂಪರ್ಕ ರಸ್ತೆ ಇಲ್ಲದ ಪ್ರಯುಕ್ತ ಹಾಗೂ 6 ಗ್ರಾಮಗಳಿಗೆ ಪ್ರಯಾಣಿಕರ ಕೊರತೆಯಿಂದ ಸಾರಿಗೆ ಆದಾಯ ಬಾರದೇ ಇರುವುದರಿಂದಾಗಿ, ಸಾರಿಗೆ ಸಂಪರ್ಕ ಒದಗಿಸಿರುವುದಿಲ್ಲ. ತಾಲ್ಲೂಕುವಾರು ಸಾರಿಗೆ ಸೌಲಭ್ಯ ಒದಗಿಸಿದ ಹಾಗೂ ಒದಗಿಸದೇ ಇರುವ ಹಳ್ಳಿಗಳ ವಿವರ **ಅನುಬಂಧ–ಆ** ರಲ್ಲಿ ಲಗತ್ತಿಸಲಾಗಿದೆ.

ಇ) ರಸ್ತೆ ಸರಿ ಇಲ್ಲದ ಬಗ್ಗೆ ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪಂಚಾಯತ್ ಅಧಿಕಾರಿಯವರ ಗಮನಕ್ಕೆ ತರಲಾಗಿದ್ದು, ಈ ಗ್ರಾಮಗಳಿಗೆ ಭಾರಿ ವಾಹನಗಳ ಸಂಚಾರಕ್ಕೆ ಯೋಗ್ಯ ರಸ್ತೆ ಕಲ್ಪಿಸಿದಲ್ಲಿ ಈ ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗುವುದು.

ಪ್ರಯಾಣಿಕರ ಕೊರತೆಯಿಂದಾಗಿ ಆದಾಯ ಬಾರದೇ ಸಾರಿಗೆಗಳನ್ನು ಸ್ಥಗಿತಗೊಳಿಸಲಾದ 6 ಹಳ್ಳಿಗಳಿಗೆ ಜನರ ಒತ್ತಡಕ್ಕನುಗುಣವಾಗಿ ಸಾರಿಗೆಗಳನ್ನು ಪುನಃ ಪ್ರಾರಂಭಿಸಲಾಗುವುದು.

ಅನುಬಂಧ-ಆ

ವಿಧಾನ ಸಭೆ ಪ್ರಶ್ನೆ ಸಂಖ್ಯೆ 1116

ಬೀದರ ಜಿಲ್ಲೆಯ ತಾಲ್ಲೂಕುವಾರು ಸಾರಿಗೆ ಸೌಲಭ್ಯ ಒದಗಿಸಿರುವ/ಒದಗಿಸದೇ ಇರುವ ಗ್ರಾಮಗಳ ವಿವರ

ವಿವರ	ಬೀದರ	ಹುಮನಾಬಾದ	ಬಸವಕಲ್ಯಾಣ	ಭಾಲ್ಕಿ	ಔರಾದ	ಒಟ್ಟು
ಜನವಸತಿವುಳ್ಳ ಒಟ್ಟು ಹಳ್ಳಿಗಳು	125	84	113	120	149	591
ಸಾರಿಗೆ ಸೌಕರ್ಯ ಕಲ್ಪಿಸಿದ ಹಳ್ಳಿಗಳು	121	81	110	115	144	571
ಬಾಕಿ ಇರುವ ಹಳ್ಳಿಗಳು	04	03	03	05	05	20
ರಸ್ತೆ ಸರಿ ಇಲ್ಲದ ಪ್ರಯುಕ್ತ	02	02	01	04	05	14
ಕಡಿಮೆ ಸಾರಿಗೆ ಆದಾಯ ಬಂದಿರುವ ಹಳ್ಳಿಗಳು	02	01	02	01	00	06

ಬೀದರ ಜಿಲ್ಲೆಯಲ್ಲಿ ಈ ಕೆಳಕಾಣಿಸಿದ 14 ಗ್ರಾಮಗಳಿಗೆ ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ಇಲ್ಲದ ಕಾರಣ ಸಾರಿಗೆ ಸೌಕರ್ಯ ಕಲ್ಪಿಸಲಾಗಿರುವುದಿಲ್ಲ.

1) ಚೌವಳಿ 2) ಮುಗದಾಳ 3) ಖಾನಾಪುರ 4) ಧಾಮೂರಿ 5) ಹರನಾಳ್ 6) ಶಮಶಾಪುರವಾಡಿ 7) ನೀಲಮನಹಳ್ಳಿ 8) ಜೈನಾಪುರ 9) ಸೈದಾಪುರವಾಡಿ 10) ಜೀರ್ಗಾ 11) ಖಾಶಂಪೂರ 12) ಲಿಂಗದಳ್ಳಿ (ಯು) 13) ಮುರಗಾ (ಕೆ) 14) ಬಾಲೂರ

ಮೇಲಿನ ಗ್ರಾಮಗಳಿಗೆ ಬಸ್ ಸಂಚಾರ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಕಲ್ಪಿಸಿದಲ್ಲಿ ವಾಹನಗಳ ಕಾರ್ಯಾಚರಣೆ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಅದೇ ರೀತಿ ಈ ಹಿಂದೆ, ಈ ಕಾಣಿಸಿದ 6 ಗ್ರಾಮಗಳಿಗೆ ಸಾರಿಗೆ ಸೌಕರ್ಯ ಕಲ್ಪಿಸಲಾಗಿದ್ದು, ಸದರಿ ಸಾರಿಗೆಗಳಿಗೆ ಜನದಟ್ಟಣೆ ಇಲ್ಲದ ಪ್ರಯುಕ್ತ ಮತ್ತು ಅವುಗಳ ಆದಾಯ ಉತ್ತೇಜನಕಾರಿ ಇಲ್ಲದ ಪ್ರಯುಕ್ತ ಸಾರಿಗೆ ಸೌಕರ್ಯ ಕಡಿತಗೊಳಿಸಲಾಗಿದೆ.

1) ಸಿಕಿಂದಪುರ 2) ಬಕಚೌಡಿ 3) ಫಾತೀಮಾಪುರ 4) ನೀಲಕಂಠ 5) ಖಾನಾಪುರ 6) ಖುದಾಂಪುರ.

ಅನುಬಂದ–ಆ

		ಈಕರಸಾ.ಸಂಸ್ಥೆಗೆ 2011–12ನೇ ಸಾಲಿಗೆ ಬೀದರ್ ಜಿಲ್ಲೆಯಲ್ಲಿ ಪ್ರಸ್ತಾಪಿಸಿರುವ ಆಮದಾನ		414.00		
		ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ		**414.00**		
ಕ್ರ.ಸಂ	ಶಾಲ್ಟಾಕು/ ವಿಧಾನ ಸಭಾ ಕ್ಷೇತ್ರ	ಡಾ:ನಂಜುಂಡಪ್ಪ ವರದಿಯನ್ವಯ ಗುರುತಿಸಿರುವ ಶಾಲ್ಟಾಕುಗಳ ಸ್ಥಿತಿಗತಿಗಳ ವಿವರ	ಕಾಮಗಾರಿಯ ಹೆಸರು	ಕಾಮಗಾರಿಯ ಒಟ್ಟು ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಪ್ರಸಕ್ತ ಸಾಲಿನಲ್ಲಿ ಕಾಯ್ಕರಿಸಲಾದ ಮೊತ್ತ ರೂ. ಲಕ್ಷಗಳಲ್ಲಿ	ಷರಾ
ಬೀದರ ಜಿಲ್ಲೆ						
1	ಔರಾದ	ಅ. ಹಿಂದುಳಿದ	ಸಂತಪೂರವಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು	50.00	50.00	ಕಾಮಗಾರಿ ಪ್ರಗತಿಯಲ್ಲಿದ್ದು ಲಿಂಟಲ್ ಹಂತಕ್ಕೆ ಬಂದಿರುತ್ತದೆ.
2	ಔರಾದ	ಅ. ಹಿಂದುಳಿದ	ಜಾಣಾಕುಸುಪೂರವಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು	15.00	4.00	ಕಾಮಗಾರಿ ಪೂರ್ಣಗೊಂಡಿರುತ್ತದೆ.
3	ಔರಾದ	ಅ. ಹಿಂದುಳಿದ	ಔರಾದ ತಾಲೂಕಿನಲ್ಲಿ ಮಿನಿ ಬಸ್‌ನಿಲ್ದಾಣಗಳನ್ನು ನಿರ್ಮಿಸುವುದು (ಮುಧೋಳ, ಜೋರದಾಬ್ಯಾ, ಎಕ್ಕಂದಾ, ವಡಗಾಂವ, ಬಂಗಾರಶಿವಮಂದಾ,ಚಿಕಲಿ)	100.00	25.00	ಮುಧೋಳ ಬಸ್ ನಿಲ್ದಾಣ ನಿರ್ಮಿಸುವುದಕ್ಕೆ ಮಂಡಳಿ ನಿರ್ದೇಶಕರ ಅನುಮೋದನೆ ಪಡೆಯಲಾಗಿರುತ್ತದೆ.
4	ಔರಾದ	ಅ. ಹಿಂದುಳಿದ	ಔರಾದ ಬಸ ನಿಲ್ದಾಣದ ಮುಖ್ಯ ಕಟ್ಟಡವನ್ನು ಪುನಃಶ್ಚೇತನಗೊಳಿಸುವುದು. ಹಾಗೂ ಮುಚ್ಚಳಹೊದಿಕೆಯನ್ನು ಅಳವಡಿಸುವುದು.	35.00	25.00	ಕಾಮಗಾರಿ ಪ್ರಗತಿಯಲ್ಲಿದು, ಪುನಃಶ್ಚೇತನ ಕಾಮಗಾರಿ ಕೈಗೊಳ್ಳಲಾಗುತ್ತಿದೆ.
					104.00	
1	ಭಾಲ್ಕಿ	ಅ. ಹಿಂದುಳಿದ	ಭಾಲ್ಕಿಯಲ್ಲಿ ನೂತನ ಮಾದರಿಯ ಬಸ್ ನಿಲ್ದಾಣ ನಿರ್ಮಿಸುವುದು	113.00	80.00	ಕಾಮಗಾರಿ ಪ್ರಗತಿಯಲ್ಲಿದು, ಮೊದಲ ಮಹಡಿಯ ಛಾವಣಿ ಕಾಂಕ್ರೀಟ್ ಅಳವಡಿಸಬೇಕಿರುತ್ತದೆ.
1	ಹುಮ್ನಾಬಾದ	ಅ. ಹಿಂದುಳಿದ	ಮನ್ನಾ–ಯಕ–ಹಳ್ಳಿಯಲ್ಲಿ ನೂತನ ಮಾದರಿಯ ಬಸ್ ನಿಲ್ದಾಣದ ಅಭಿವೃದ್ಧಿ	60.00	60.00	ಕಾಮಗಾರಿ ಪ್ರಗತಿಯಲ್ಲಿರುತ್ತದೆ.
1	ಬಸವಕಲ್ಯಾಣ	ಅ. ಹಿಂದುಳಿದ	ಬಸವಕಲ್ಯಾಣ ಬಸ್ ಘಟಕದ ಆವರಣಕ್ಕೆ ಟ್ರಿಮಿಕ್ಸ್ ಕಾಂಕ್ರೀಟ್ ಅಳವಡಿಸುವ ಕಾಮಗಾರಿ	170.00	170.00	ಕಾಮಗಾರಿ ಪ್ರಗತಿಯಲ್ಲಿರುತ್ತದೆ.
ಬೀದರ್ ಜಿಲ್ಲೆಯ ಪ್ರಸ್ತಾಪಿತ ಕಾಮಗಾರಿಗಳ ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ					414.00	